**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ರವರ ನ್ಯಾಯಾಲಯ, ಶೃಂಗೇರಿ**

**ಸಿ.ಸಿ.ನಂಃ 447/2022**

**ಫಿರ್ಯಾದುದಾರರುಃ** ಸರ್ಕಾರದ ಪರವಾಗಿ ಶೃಂಗೇರಿ ಪೊಲೀಸರು

-: **ವಿರುದ್ಧ** :-

**ಆರೋಪಿಃ** 1. ಶಬರೀಶ ಬಿನ್ ರಮೇಶ,
ವಯಸ್ಸು 30 ವರ್ಷ,
ವಾಸಃ ಕಾಂಚಿನಗರ, ಶೃಂಗೇರಿ ತಾಲ್ಲೂಕು.

2. ರಮೇಶ ಬಿನ್ ರಂಗಸ್ವಾಮಿ,
ವಯಸ್ಸು 57 ವರ್ಷ,
ವಾಸಃ ಕಾಂಚಿನಗರ, ಶೃಂಗೇರಿ ತಾಲ್ಲೂಕು.

3. ಸಿ.ಎಂ. ರಾಜಶೇಖರ್ ಬಿನ್ ಮುತ್ತು,
ವಯಸ್ಸು 44 ವರ್ಷ,
ವಾಸಃ ಕಾಂಚಿನಗರ, ಶೃಂಗೇರಿ ತಾಲ್ಲೂಕು.

**ಹೆಚ್ಚುವರಿ ದೋಷಾರೋಪಣೆ**

ಶ್ರೀ. ಜೀತು ಆರ್.ಎಸ್., ಬಿ.ಎ.ಎಲ್., ಎಲ್‌ಎಲ್.ಎಂ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಶೃಂಗೇರಿ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 29.02.2020 ರಂದು ಸಂಜೆ 4.00 ಗಂಟೆಗೆ ಶೃಂಗೇರಿ ಪೋಲೀಸ್ ಠಾಣಾ ಸರಹದ್ದಿನ ಕಾಂಚೀನಗರದಲ್ಲಿ 2 ನೇ ಅರೋಪಿಯಾದ ನಿಮ್ಮ ಮನೆಯಲ್ಲಿ ಸರ್ಕಾರದ ಯಾವುದೇ ಪರವಾನಗಿ ಇಲ್ಲದೇ ಶ್ರೀಗಂಧದ ತುಂಡುಗಳು, 1) Apex ಎಂದು ಬರೆದಿರುವ ಕಪ್ಪು ಬಣ್ಣದ ಎರ್ ಗನ್, 2) Blanca ಎಂದು ಬರೆದಿರುವ ಕಪ್ಪು ಬಣ್ಣದ ಎರ್ ಪಿಸ್ತೂಲ್, 3) Pistol Pellets-2 No., 4) Fiber items-30 No.s, 5) Air Riffel Pellets-5 No., 6) Electrical detonator-2 No., with frame ಜೀವಂತ -7 No.s 7) Blasting

connecting wire– 8 No.s  8) Gund powder– 50 gm, 9) Gun cleaning oil, 10) Gelitine explosive tube–3 No., ಇವುಗಳನ್ನು ಅಕ್ರಮವಾಗಿ ಸಂಗ್ರಹಿಸಿಟ್ಟಿರುತ್ತೀರಿ. ಈ ರೀತ್ಯ 2 ನೇ ಆರೋಪಿಯಾದ ನೀವು Explosive Substances Act ಕಲಂ 9(b) ಮತ್ತು ಭಾರತೀಯ ದಂಡ ಸಂಹಿತೆಯ ಕಲಂ 34  ರಂತೆ  ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಸರ್ಕಾರದ ಯಾವುದೇ ಪರವಾನಗಿ ಇಲ್ಲದೇ 0.22 ಏರ್ ರೈಫಲ್ ಅನ್ನು ಮತ್ತು ಮೇಲ್ಕಂಡ ವಸ್ತುಗಳನ್ನು ಅಕ್ರಮವಾಗಿ 2 ನೇ ಅರೋಪಿಯ ಮನೆಯಲ್ಲಿ ದಾಸ್ತಾನು ಮಾಡಿರುತ್ತೀರಿ. ಈ ರೀತ್ಯ ಆರೋಪಿಯಾದ ನೀವು Explosive Substances Act ಕಲಂ 9(b) ರಂತೆ ಹಾಗೂ Arms Act ಕಲಂ 3 ಮತ್ತು 25 ರಂತೆ ಮತ್ತು ಭಾರತೀಯ ದಂಡ ಸಂಹಿತೆಯ ಕಲಂ 34  ರಂತೆ  ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 3 ನೇ ಆರೋಪಿಯಾದ ನೀವು 2 ನೇ ಆರೋಪಿಯ ಮನೆಯಲ್ಲಿ 4 ನೇ ಅರೋಪಿ ನೀಡಿದ ಮೇಲ್ಕಂಡ ಸ್ಫೋಟಕಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುತ್ತೀರಿ. ಈ ರೀತ್ಯ 3 ನೇ ಆರೋಪಿಯಾದ ನೀವು Explosive Substances Act ಕಲಂ 9(b) ಮತ್ತು ಭಾರತೀಯ ದಂಡ ಸಂಹಿತೆಯ ಕಲಂ 34 ರಂತೆ  ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಸದರಿ ಮೇಲ್ಕಂಡ 1, 2 ಮತ್ತು 3 ನೇ ಆರೋಪಿಯಾದ ನೀವುಗಳು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮೇಲೆ ಹೇಳಿದ ಅಪರಾದಗಳನ್ನು ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದೆಂದು ಆದೇಶಿಸಲಾಗಿದೆ.

**ಪ್ರಶ್ನೆ-1** : ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದಿರಾ? ಅವುಗಳು ನಿಮಗೆ ಅರ್ಥವಾಯಿತೇ?

**ಉತ್ತರ** : ಅರ್ಥವಾಯಿತು.

**ಪ್ರಶ್ನೆ-2 :** ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

**ಉತ್ತರಃ :** ವಿಚಾರಣೆಯಾಗಬೇಕು.

(ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.)

**ದಿನಾಂಕಃ**

**ಸಹಿ/-** 12.03.2026
**(ಜೀತು ಆರ್.ಎಸ್.)**
**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**
**ಶೃಂಗೇರಿ.**

**ಆರೋಪಿಯ ಸಹಿಃ**